# ರಾಮಕೃಷ್ಣ ಮಹಾಸಂಘದ ಗುರು ಪರಂಪರೆ

ಮೀನಾ ವಿ.

(ಹಿಂದಿನ ಸಂಚಿಕೆಯಿಂದ)



### ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್

೧೯೧೯ ರಲ್ಲಿ ಈಗಿನ ಬಾಂಗ್ಲಾದೇಶದ ಢಾಕಾದಲ್ಲಿದ್ದ ಸಲಜ್‌ಪುರದಲ್ಲಿ ಹುಟ್ಟಿದ ಪರಮಪೂಜ್ಯರ ಹಿಂದಿನ ಹೆಸರು ಸತ್ಯಕೃಷ್ಣ. ಚಿಕ್ಕ ವಯಸ್ಸಿನಲ್ಲಿಯೇ ದಿನಾಜಪುರದ ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಗದಾಧರಾನಂದಜಿ ಮಹಾರಾಜರ ಪವಿತ್ರ ಸಾನ್ನಿಧ್ಯ ಇವರಿಗೆ ಲಭಿಸಿತು. ಇದರಿಂದ ಅವರು ಬಹಳ ಪ್ರಭಾವಿತರಾದರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅವರು ಕೊಲ್ಕತಾ ವಿಶ್ವವಿದ್ಯಾನಿಲಯವನ್ನು ಸೇರಿದರು. ಅಲ್ಲಿ ಸ್ವಾಮಿ ಬ್ರಹ್ಮಾನಂದರ ಶಿಷ್ಯರಾದ ಸ್ವಾಮಿ ನಿರ್ವಾಣಾನಂದಜಿ, ಸ್ವಾಮಿ ವಿವೇಕಾನಂದರ ಶಿಷ್ಯರಾದ ಅಚಲಾನಂದಜಿ ಮಹಾರಾಜ್ ಅವರುಗಳ ಸಂಪರ್ಕಕ್ಕೆ ಬಂದು, ಅವರಿಂದ ಸ್ಫೂರ್ತಿಯನ್ನು ಪಡೆದರು. ೧೯೩೮ ರಲ್ಲಿ ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರಾದ ಸ್ವಾಮಿ ವಿಜ್ಞಾನಾನಂದಜಿ ಮಹಾರಾಜ್ ಅವರಿಂದ ಮಂತ್ರದೀಕ್ಷೆಯನ್ನು ಪಡೆದರು. ಅಲ್ಲದೆ, ಶ್ರೀರಾಮಕೃಷ್ಣರ ಇತರ ಸಾಕ್ಷಾತ್ ಶಿಷ್ಯರಾದ ಸ್ವಾಮಿ ಅಖಂಡಾನಂದಜಿ ಮತ್ತು ಸ್ವಾಮಿ ಅಭೇದಾನಂದಜಿ ಅವರುಗಳ ದರ್ಶನವನ್ನೂ ವಿದ್ಯಾರ್ಥಿದೆಸೆಯಲ್ಲಿದ್ದಾಗ ಪಡೆದರು.

ಪರಮಪೂಜ್ಯರು ೧೯೪೧ ರಲ್ಲಿ ರಾಮಕೃಷ್ಣ ಮಹಾಸಂಘವನ್ನು ಸೇರಿದರು. ಆಗಿನ ಅಧ್ಯಕ್ಷರಾಗಿದ್ದ ಸ್ವಾಮಿ ವಿರಜಾನಂದಜಿ ಅವರಿಂದ ಬ್ರಹ್ಮಚರ್ಯ ಮತ್ತು ಸಂನ್ಯಾಸ ದೀಕ್ಷೆಗಳೆರಡನ್ನೂ ಪಡೆದರು.

ಸ್ವಾಮಿ ಆತ್ಮಸ್ಥಾನಂದಜಿ ಅವರು ಬಹುಕಾಲ ಸ್ವಾಮಿ ವಿರಜಾನಂದಜಿ ಮಹಾರಾಜ್ ಅವರ ಸೇವೆಯನ್ನು ಮಾಡಿದರು. ಆ ಸಮಯದಲ್ಲಿ ಅವರು ಹಿಮಾಲಯದ ಶ್ಯಾಮಲಾತಲ ಆಶ್ರಮ, ಬೇಲೂರು ಮಠ ಮತ್ತಿತರ ಕಡೆಗಳಲ್ಲಿ ತಂಗಿದ್ದರು. ೧೯೫೨ ರಲ್ಲಿ ರಾಂಚಿಯ ಟಿ.ಬಿ. ಆಸ್ಪತ್ರೆಯಲ್ಲಿ ಸಹ ಕಾರ್ಯದರ್ಶಿಗಳಾಗಿ, ನಂತರ ೧೯೫೮ ರಲ್ಲಿ ರಂಗೂನಿನ ಸೇವಾಶ್ರಮದ (ಆಸ್ಪತ್ರೆ) ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಸ್ವಾಮೀಜಿಯವರು, ರಂಗೂನಿನ ಆಸ್ಪತ್ರೆಯನ್ನು ಬರ್ಮಾ ದೇಶದಲ್ಲೇ ಅತ್ಯಂತ ಉತ್ತಮ ಮತ್ತು ಅತ್ಯಾಧುನಿಕ ಆಸ್ಪತ್ರೆಯಾಗಿ ಪರಿವರ್ತಿಸಿದರು.

೧೯೬೬ ರಲ್ಲಿ ರಾಜಕೋಟ್ ಆಶ್ರಮದ ಅಧ್ಯಕ್ಷರಾಗಿ ನಿಯುಕ್ತಿಗೊಂಡ ಪರಮಪೂಜ್ಯರು ಅಲ್ಲಿನ ಶ್ರೀರಾಮಕೃಷ್ಣ ದೇವಾಲಯದ ನಿರ್ಮಾಣ ಕಾರ್ಯದಲ್ಲಿ ಆಸಕ್ತಿ ವಹಿಸಿದರು.

೧೯೭೩ ರಲ್ಲಿ ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳಾಗಿ ಆಯ್ಕೆಗೊಂಡ ಸ್ವಾಮಿಗಳು, ೧೯೭೫ ರಲ್ಲಿ ಅದರ ಸಹಕಾರ್ಯದರ್ಶಿಗಳಾಗಿ ನಿಯುಕ್ತಿಗೊಂಡರು. ಆ ಸಮಯದಲ್ಲಿ ರಾಮಕೃಷ್ಣ ಮಹಾಸಂಘದ ಅನೇಕ ಪರಿಹಾರ ಕಾರ್ಯಗಳನ್ನು ಮುನ್ನಡೆಸಿದರು, ಬೇಲೂರು ಮಠದ ಬಳಿಯಿರುವ ಶಾರದಾಪೀಠದಲ್ಲಿ 'ಸಮಾಜ ಸೇವಕ ಶಿಕ್ಷಾ ಮಂದಿರ' ವನ್ನು ಆರಂಭಿಸಿದರು.

೧೯೯೨ ರಲ್ಲಿ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪರಮಪೂಜ್ಯರು, ೧೯೯೭ ರಲ್ಲಿ ಉಪಾಧ್ಯಕ್ಷರಾಗಿ ಭಾರತದ ಹಲವಾರು ಕಡೆಗಳಲ್ಲಿರುವ ರಾಮಕೃಷ್ಣ ಕೇಂದ್ರಗಳನ್ನು ಸಂದರ್ಶಿಸಿ ಮಂತ್ರದೀಕ್ಷೆಯನ್ನು ನೀಡಿದರು. ೧೯೯೮ ರಲ್ಲಿ ಅವರು ಅಮೆರಿಕದ ಅನೇಕ ಸ್ಥಳಗಳು, ಕೆನಡಾ, ಜಪಾನ್, ಸಿಂಗಪೂರ್, ಮಲೇಷಿಯಾ, ಬಾಂಗ್ಲಾದೇಶ್ ಮುಂತಾದ ದೇಶಗಳಿಗೆ ಭೇಟಿ ಇತ್ತರು.

ಡಿಸೆಂಬರ್ ೩, ೨೦೦೭ ರಂದು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪರಮಾಧ್ಯಕ್ಷರಾಗಿ ಆಯ್ಕೆಗೊಂಡ ಪರಮಪೂಜ್ಯರು ಈಗ ಸಂಘವನ್ನು ಮುನ್ನಡೆಸುತ್ತಿದ್ದಾರೆ. ಅವರ ಆಶೀರ್ವಾದ ನಮ್ಮ ನಿಮ್ಮೆಲ್ಲರ ಮೇಲೆ ಇರಲಿ ಎಂದು ಪ್ರಾರ್ಥಿಸೋಣ.